ಕರ್ನಾಟಕ ಸರ್ಕಾರ
ಕರ್ನಾಟಕ ಅರಣ್ಯ ಇಲಾಖೆ

ದೂರವಾಣಿ :0824 – 2423913
0824 – 2411242
ಇ-ಮೇಲ್:dcf_mngt@yahoo.co.in
dcfmng@aranya.gov.in

ಉಪ ಅರಣ್ಯ ಸಂರಕ್ಷಣಾಧಿಕಾರಿಗಳ ಕಛೇರಿ, ಮಂಗಳೂರು ವಿಭಾಗ, ಪಿ.ಡಬ್ಲ್ಯೂಡಿ.ಕಟ್ಟಡ, ನೆಹರೂ ಮೈದಾನದ ಬಳಿ ಮಂಗಳೂರು 575001

ಸಂ:ಭೂಶಾಖೆ.ಕೆ.ವಿ.ಸ್ಟೇಷನ್.11/2004–05
Proposal No . KA-017/2017.

ದಿನಾಂಕ:06-3–2019.

ಇವರಿಗೆ,

ಕಾರ್ಯ ನಿರ್ವಾಹಕ ಇಂಜಿನಿಯರ್ (ವಿದ್ಯುತ್),
ಮಂಗಳೂರು ವಿದ್ಯುಚ್ಛಕ್ತಿ ಸರಬರಾಜು ಕಂಪನಿ ನಿಯಮಿತ (ಮೆಸ್ಕಾಂ),
ಪುತ್ತೂರು ವಿಭಾಗ.

ಮಾನ್ಯರೇ,

ವಿಷಯ : Diversion of 0.80 ha. of Reserved Forest land in Sy No. 125/P of Sampaje village, Sulya Taluk, Dakshina Kannada District, Mangalore Division for construction of 33/11 KV substation at Rajarampura in favour of the Executive Engineer (Elec), MESCOM, Puttur Division.

ಉಲ್ಲೇಖ : ಈ ಕಛೇರಿ ಪತ್ರ ಸಮ ಸಂಖ್ಯೆ ದಿನಾಂಕ:07-7–2018.

*********

ಮೇಲ್ಕಂಡ ವಿಷಯಕ್ಕೆ ಸಂಬಂಧಿಸಿದಂತೆ, ನಿಮ್ಮ ವಿಭಾಗ ವ್ಯಾಪ್ತಿಯಿಂದ ಸುಳ್ಯ ತಾಲೂಕು ಸಂಪಾಜೆ ಗ್ರಾಮದ ರಾಜಾರಾಂಪುರ ಎಂಬಲ್ಲಿ ಸ್ಥಾಪಿಸಲು ಉದ್ದೇಶಿಸಿರುವ 33/11 ಕೆ.ವಿ. ವಿದ್ಯುತ್ ಉಪ ಕೇಂದ್ರಕ್ಕೆ ಸಂಪಾಜೆ ಮೀಸಲು ಅರಣ್ಯದ 0.80 ಹೆ. ಅರಣ್ಯ ಭೂಮಿಯನ್ನು ಅರಣ್ಯೇತರ ಉದ್ದೇಶಕ್ಕಾಗಿ ಬಳಸಲು ಸಲ್ಲಿಸಿದ ಪ್ರಸ್ತಾವನೆಯನ್ನು ಪರಿಶೀಲಿಸಿ, ಮೂಲ ಪ್ರಸ್ತಾವನೆಯನ್ನು ಮುಖ್ಯ ಅರಣ್ಯ ಸಂರಕ್ಷಣಾಧಿಕಾರಿ, ಮಂಗಳೂರು ಇವರಿಗೆ ಸಲ್ಲಿಸಲಾಗಿರುತ್ತದೆ.

ಆದರೆ, ಮುಖ್ಯ ಅರಣ್ಯ ಸಂರಕ್ಷಣಾಧಿಕಾರಿ, ಮಂಗಳೂರು ಇವರು ಈ ಕಛೇರಿಗೆ ಪತ್ರವನ್ನು ಬರೆದು ಸಹಾಯಕ ಕಾರ್ಯನಿರ್ವಾಹಕ ಇಂಜಿನಿಯರ್, ಮಂಗಳೂರು ವಿದ್ಯುಚ್ಛಕ್ತಿ ಸರಬರಾಜು ಕಂಪೆನಿ (ಮೆಸ್ಕಂ) ಸುಳ್ಯ ಉಪ ವಿಭಾಗ ಇವರ ವತಿಯಿಂದ ಪಂಜ ವಲಯದ ಎಣ್ಮೂರು ಕಾದಿರಿಸಿದ ಅರಣ್ಯದೊಳಗೆ ಹೇಮಳ ಹಾಮ್ಲೆಟ್ ಯೋಜನೆಯಡಿ 0.131 ಹೆ. ಅರಣ್ಯ ಪ್ರದೇಶವನ್ನು ಸರ್ಕಾರದ ಪೂರ್ವಾನುಮತಿ ಪಡೆಯದೇ ಉಪಯೋಗಿಸಿಕೊಂಡು ಅರಣ್ಯ ಸಂರಕ್ಷಣಾ ಕಾಯ್ದೆಯನ್ನು ಉಲ್ಲಂಘನೆ ಮಾಡಿರುವುದಕ್ಕೆ ಎನ್.ಪಿ.ವಿ., ಸಿ.ಎ. ಮತ್ತು ವಿಧಿಸಿದ ಯಾವುದೇ ದಂಡನೆಯ ಮೊತ್ತವನ್ನು ಪಾವತಿಸುವುದಾಗಿ ಮುಚ್ಚಳಿಕೆ ಪತ್ರವನ್ನು ಸಹಾಯಕ ಕಾರ್ಯನಿರ್ವಾಹಕ ಇಂಜಿನಿಯರ್, ಮಂಗಳೂರು ವಿದ್ಯುಚ್ಛಕ್ತಿ ಸರಬರಾಜು ಕಂಪೆನಿ (ಮೆಸ್ಕಂ) ಸುಳ್ಯ ಉಪ ವಿಭಾಗ ಇವರಿಂದ ಪಡೆದು ಸಲ್ಲಿಸಲು ಸೂಚಿಸಿರುತ್ತಾರೆ. ಅದರಂತೆ, ಈ ಕಛೇರಿಯಿಂದ ದಿನಾಂಕ:29-1–2018ರಂದು www.forestsclearance.nic.in ವೆಬ್‌ಸೈಟ್‌ನಲ್ಲಿ ಮುಚ್ಚಳಿಕೆ ಪತ್ರವನ್ನು ಸದ್ರಿಯವರಿಂದ ಪಡೆದು ಅಪ್‌ಲೋಡ್ ಮಾಡಲು ತಮಗೆ ಸೂಚಿಸಲಾಗಿತ್ತು. ಆದರೆ, ತಮ್ಮ ವತಿಯಿಂದ ವಿಳಂಭವಾಗಿ www.forestsclearance.nic.in ವೆಬ್‌ಸೈಟ್‌ನಲ್ಲಿ ತಾವು ದಿನಾಂಕ:21-2–2019 ರಂದು ಯಾವುದೇ ದಾಖಲೆಗಳನ್ನು ಅಪ್‌ಲೋಡ್ ಮಾಡದೇ "The correction have been made as per the instruction received " ನಮೂದಿಸಿ ಈ ಕಛೇರಿಗೆ ಹಿಂದಿರುಗಿಸಿರುತ್ತೀರಿ.

ಆದರೆ, ಇದು ಸರಿಯಾದ ಕ್ರಮವಲ್ಲ. ಆದ್ದರಿಂದ ಸುಳ್ಯ ತಾಲೂಕು ಸಂಪಾಜೆ ಗ್ರಾಮದ ರಾಜಾರಾಂಪುರ ಎಂಬಲ್ಲಿ ಸ್ಥಾಪಿಸಲು ಉದ್ದೇಶಿಸಿರುವ 33/11 ಕೆ.ವಿ. ವಿದ್ಯುತ್ ಉಪ ಕೇಂದ್ರಕ್ಕೆ ಸಂಬಂಧಿಸಿದ ಪ್ರಸ್ತಾವನೆಯನ್ನು ಈ ಕಛೇರಿಯಿಂದ ಮೇಲಧಿಕಾರಿಗಳಿಗೆ ಆನ್‌ಲೈನ್ ಮುಖಾಂತರ ಸಲ್ಲಿಸಬೇಕಾದಲ್ಲಿ ನೀವು ಕೂಡಲೇ ಸಹಾಯಕ ಕಾರ್ಯನಿರ್ವಾಹಕ ಇಂಜಿನಿಯರ್, ಮಂಗಳೂರು ವಿದ್ಯುಚ್ಛಕ್ತಿ ಸರಬರಾಜು ಕಂಪೆನಿ (ಮೆಸ್ಕಂ) ಸುಳ್ಯ ಉಪ ವಿಭಾಗ ಇವರಿಂದ ಪಂಜ ವಲಯದ ಎಣ್ಮೂರು ಕಾದಿರಿಸಿದ ಅರಣ್ಯದೊಳಗೆ ಹೇಮಳ ಹಾಮ್ಲೆಟ್ ಯೋಜನೆಗೆ ಸಂಬಂಧಿಸಿದಂತೆ ನೆಟ್ ಪ್ರೆಸ್ಸೆಂಟ್ ವ್ಯಾಲ್ಯೂ, ಪರಿಹಾರಾತ್ಮಕ ನೆಡುತೋಪು ವೆಚ್ಚ ಹಾಗೂ ಯಾವುದೇ ವಿಧಿಸಿದ ದಂಡನೆಯನ್ನು ಪಾವತಿಸಲು ಬದ್ಧರಿರುವುದಾಗಿ ಸೂಕ್ತ ಮುಚ್ಚಳಿಕೆ ಪತ್ರವನ್ನು ಪಡೆದು Forestsclearance.nic.in ನಲ್ಲಿ ಅಪ್‌ಲೋಡ್ ಮಾಡಲು ಕೋರಿದೆ.

ತಮ್ಮ ನಂಬುಗೆಯ,

ಉಪ ಅರಣ್ಯ ಸಂರಕ್ಷಣಾಧಿಕಾರಿ
ಮಂಗಳೂರು ವಿಭಾಗ, ಮಂಗಳೂರು.

D:\Local Disk (D) - LND\LND - My Documents\TBR-LAND\F . c cases\Rajarampur\Letter.doc